# ಶಿಕ್ಷಕರು

## ಕಟ್ಟಲೂ ಬಹುದು ಕೆಡವಲೂಬಹುದು

ಗುರುರಾಜ್ ಕೆ.ಎಸ್.

ನಾನು ಕರ್ನಾಟಕ ರಾಜ್ಯದ ಧಾರವಾಡದ ಒಂದು ಖಾಸಗಿ ಸಹ–ಶಿಕ್ಷಣ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕಿಂಡರ್ ಗಾರ್ಟನ್‌ನಿಂದ 10ನೇ ತರಗತಿಯವರೆಗೆ ಕಲಿತಿದ್ದೇನೆ.

ಅನೇಕ ದಶಕಗಳಷ್ಟು ಹಳೆಯದಾದ ಒಂದು ಹೆಣ್ಣು ಮಕ್ಕಳ ಕನ್ನಡ ಮಾಧ್ಯಮ ಪ್ರೌಢಶಾಲೆಯಲ್ಲಿ ನಮ್ಮ ಶಾಲೆ ಪ್ರಾರಂಭವಾಗಿತ್ತು. ನಾನು 8ನೇ ತರಗತಿಯಲ್ಲಿರುವಾಗ ಅದೇ ಆವರಣದೊಳಗಿರುವ ನಮ್ಮದೇ ಸ್ವಂತ ಶಾಲಾ ಕಟ್ಟಡಕ್ಕೆ ಸ್ಥಳಾಂತರಗೊಂಡಿರುವುದು ನನಗೆ ನೆನಪಿದೆ.

ನಮ್ಮ ಶಾಲೆಯು ಶಿಕ್ಷಣಕ್ಕೆ ಪೂರಕವಾಗಿರುವ ಅಂಶ–ಗಳಾದಂತಹ ಸಾಕಷ್ಟು ಸಂಖ್ಯೆಯ ಶಿಕ್ಷಕರು, ಉತ್ತಮ ಗಾಳಿ ಬೆಳಕುಗಳಿರುವ ತರಗತಿ ಕೊಠಡಿಗಳು, ದೊಡ್ಡ ಆಟದ ಮೈದಾನ, ಮುಕ್ತ ಸ್ಥಳಾವಕಾಶಗಳು, ಶೌಚಾಲಯಗಳು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಹೊಂದಿತ್ತು. ನಮ್ಮ ಶಾಲೆಯು ಮನೆಗೆ ತುಂಬಾ ಹತ್ತಿರವಿತ್ತು ಮತ್ತು ಶುಲ್ಕವು ಭರಿಸಲು ಸಾಧ್ಯವಾಗುವಂತಿತ್ತು.

ನಮ್ಮ ಶಾಲೆಯು ಬ್ರೆಜಿಲ್ ದೇಶದ ಶಿಕ್ಷಣ ತಜ್ಞ ಮತ್ತು ತತ್ವಜ್ಞಾನಿಯಾದ ಪೌಲೋ ಫ್ರೇರೇಯು ಇಪ್ಪತ್ತನೇ ಶತಮಾನದ ಆದಿಯಲ್ಲಿ ಜನಪ್ರಿಯಗೊಳಿಸಿದ "ಶಿಕ್ಷಣದ ಬ್ಯಾಂಕಿಂಗ್ ಪರಿಕಲ್ಪನೆಯನ್ನು" ಅನುಸರಿಸುತ್ತಿತ್ತು. ಶಿಕ್ಷಣದ ಬ್ಯಾಂಕಿಂಗ್ ಪರಿಕಲ್ಪನೆಯಲ್ಲಿ ವಿದ್ಯಾರ್ಥಿಗೆ ನೀಡಲಾಗುವ ಕ್ರಿಯೆಯ ವ್ಯಾಪ್ತಿಯು ಠೇವಣಿಗಳನ್ನು ಸ್ವೀಕರಿಸುವುದು, ವ್ಯವಸ್ಥಿತವಾಗಿಡುವುದು ಮತ್ತು ಶೇಖರಿಸುವುದರ ಮಟ್ಟಿಗೆ ಮಾತ್ರ ವಿಸ್ತರಿಸಲ್ಪಟ್ಟಿತ್ತು–ಅಂದರೆ ಇಲ್ಲಿ ಶಿಕ್ಷಕ/ಶಿಕ್ಷಕಿ ಒಬ್ಬ 'ಠೇವಣಿದಾರ' ಮತ್ತು ವಿದ್ಯಾರ್ಥಿಗಳು "ಠೇವಣಿ–ಶೇಖರಣೆದಾರರಾಗಿರುವರು". ಶಾಲೆಯಲ್ಲಿ ನಾವು ಮಾಡಬೇಕಾಗಿದ್ದ ಇನ್ನೊಂದು ಹೆಚ್ಚುವರಿ ವಿಷಯವೆಂದರೆ ನಾವು ಪರೀಕ್ಷೆಗಳಲ್ಲಿ ನಮ್ಮ ನೆನಪಿನಿಂದ ಉತ್ತರ ಬರೆಯಬೇಕಾಗಿತ್ತು.

ಒಂದು ವರ್ಷದಲ್ಲಿ ನಮಗೆ ನಾಲ್ಕು ಪರೀಕ್ಷೆಗಳಿದ್ದವು– ತ್ರೈಮಾಸಿಕ, ಮಧ್ಯಾವಧಿ, ಮೂರನೇ ತ್ರೈಮಾಸಿಕ ಮತ್ತು ಅಂತಿಮ ಪರೀಕ್ಷೆ. ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದಲ್ಲಿ, ವಿದ್ಯಾರ್ಥಿಗಳಿಗೆ ರ್‍ಯಾಂಕುಗಳನ್ನು ನೀಡಲಾಗುತ್ತಿತ್ತು. ಆ ರ್‍ಯಾಂಕುಗಳ ಆಧಾರದಲ್ಲಿ ವಿದ್ಯಾರ್ಥಿಗಳಿಗೆ ಜಾಣ, ಮತ್ತು ದಡ್ಡರೆಂಬ ಹಣೆಪಟ್ಟಿಯನ್ನು ನೀಡಲಾಗುತ್ತಿತ್ತು. ಮೊದಲನೇ ಮೂರು ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಅನುತ್ತೀರ್ಣಗೊಳ್ಳಬಹುದು ಆದರೆ ಮುಂದಿನ ತರಗತಿಗೆ ತೇರ್ಗಡೆಯಾಗಬೇಕಾದರೆ, ಅಂತಿಮ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಬೇಕಿತ್ತು.

ನಾನು ಎಂಟನೇ ತರಗತಿಗೆ ಹೋಗುತ್ತಿದ್ದಂತೆ, ಎ. ಮತ್ತು ಬಿ. ವಿಭಾಗಗಳನ್ನು ಒಂದೇ ವಿಭಾಗದಡಿಯಲ್ಲಿ ತರಲಾಯಿತು. ಆದುದರಿಂದ ನಮ್ಮ ತರಗತಿಯ ವಿದ್ಯಾರ್ಥಿ ಶಿಕ್ಷಕರ ಅನುಪಾತವು 1:56 ರಷ್ಟಾಯಿತು.

ಎಂಟನೇ ತರಗತಿಯ ವಿದ್ಯಾರ್ಥಿಗೆ ಎರಡು ಆಯ್ಕೆಗಳು ಲಭ್ಯವಿದ್ದವು; ಸಂಸ್ಕೃತವನ್ನು ಮೊದಲ ಭಾಷೆಯಾಗಿ ಆಯ್ಕೆ ಮಾಡಿದವರಿಗೆ ಇಂಗ್ಲಿಷ್ ಎರಡನೆ ಭಾಷೆಯಾಗಿತ್ತು ಮತ್ತು ಕನ್ನಡವು ಮೂರನೇ ಭಾಷೆಯಾಗಿತ್ತು. ಇಂಗ್ಲಿಷನ್ನು ಮೊದಲನೇ ಭಾಷೆಯಾಗಿ ಆಯ್ಕೆ ಮಾಡಿದ ವಿದ್ಯಾರ್ಥಿಗಳಿಗೆ ಕನ್ನಡವು ಎರಡನೇ ಭಾಷೆಯಾಗಿತ್ತು ಮತ್ತು ಹಿಂದಿಯು ಮೂರನೇ ಭಾಷೆಯಾಗಿತ್ತು. ಇತರ ಎಲ್ಲಾ ವಿಷಯಗಳಿಗೆ ಅಂದರೆ ಗಣಿತ, ವಿಜ್ಞಾನ ಮತ್ತು ಸಮಾಜ ಅಧ್ಯಯನಗಳಿಗೆ ನಾವು ಒಂದೇ ತರಗತಿಯಲ್ಲಿ ಕುಳಿತುಕೊಳ್ಳುತ್ತಿದ್ದೆವು.

ಬೋಧನೆಯನ್ನು ಒಂದು ಉದಾತ್ತ ವೃತ್ತಿಯೆಂದು ಪರಿಗಣಿಸಲಾಗಿದೆ. ತನ್ನ ವಿದ್ಯಾರ್ಥಿಗಳನ್ನು ವಿಮರ್ಶಾತ್ಮಕ ಚಿಂತಕರನ್ನಾಗಿ ರೂಪಿಸುವಲ್ಲಿ, ಅವರು ಸಮರ್ಥ ಹಾಗೂ ಜವಾಬ್ದಾರಿಯುತ ನಾಗರಿಕರಾಗಿ ಅಭಿವೃದ್ಧಿ ಹೊಂದಿ, ಬಳಿಕ ಸಮಾಜದ ಒಟ್ಟು ಕಲ್ಯಾಣವನ್ನು ಸುಸ್ಥಿರಗೊಳಿಸಲು ಮತ್ತು

ಸುಧಾರಿಸಲು ಅಗತ್ಯವಿರುವ ವಿವಿಧ ಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವ ಶಿಕ್ಷಣವನ್ನು ಅವರಿಗೆ ಒದಗಿಸುವಲ್ಲಿ ಶಿಕ್ಷಕರಿಗೆ ಒಂದು ಪ್ರಮುಖವಾದ ಪಾತ್ರವಿದೆ.

ಎಂಟನೇ ತರಗತಿಯಲ್ಲಿ ನನಗೆ ಕಲಿಸಿದ ಇಬ್ಬರು ಶಿಕ್ಷಕರು ನನಗೆ ನೆನಪಿದೆ, ಒಬ್ಬರದ್ದು ಎಲ್ಲಾ ತಪ್ಪು ಕಾರಣಗಳಿಗಾದರೆ ಒನ್ನೊಬ್ಬರು ನೆನಪಿರುವುದು ಎಲ್ಲಾ ಸರಿಯಾದ ಕಾರಣಗಳಿಗಾಗಿ.

ನಮಗೊಬ್ಬರು ಹೊಸ ಗಣಿತ ಶಿಕ್ಷಕರಿದ್ದರು. ಅವರಿಗೆ ನಮ್ಮ ಹತ್ತಿರದ ಬಾಲಕರ ಶಾಲೆಯಲ್ಲಿ ಹಲವಾರು ವರ್ಷಗಳ ಕಾಲ ವಿಷಯವನ್ನು ಬೋಧಿಸಿದ ಅನುಭವವಿತ್ತು. ಅವರು ನಮ್ಮ ಪ್ರಾಂಶುಪಾಲರ ಕಿರಿಯ ಸಹೋದರ ಕೂಡಾ ಆಗಿದ್ದರು. ಎಡೆಬಿಡದ ಧೂಮಪಾನಿಯಾಗಿದ್ದ ಅವರು ತಮ್ಮ ವಿದ್ಯಾರ್ಥಿಗಳನ್ನು ದೈಹಿಕ ಶಿಕ್ಷೆಗೆ ಒಳಪಡಿಸುವುದರಲ್ಲಿ ತೋರಿಸಿದ ನವೀನತೆಗೆ ಹೆಸರುವಾಸಿಯಾದರು. ಹೋಂವರ್ಕನ್ನು ಮಾಡಿಕೊಂಡು ಬರಲು ತಪ್ಪಿದವರು ಮತ್ತು ಪರೀಕ್ಷೆಗಳಲ್ಲಿ ಕಡಿಮೆ ಅಂಕಗಳನ್ನು ಪಡೆದವರು ಶಿಕ್ಷೆಗೆ ಗುರಿಯಾಗುತ್ತಿದ್ದ ವಿದ್ಯಾರ್ಥಿಗಳಾಗಿದ್ದರು. ಅವರ ಶಿಕ್ಷೆಯು ಕೇವಲ ಹುಡುಗರಿಗಷ್ಟೇ ಮೀಸಲಾಗಿತ್ತು ಮತ್ತು ಅದರಲ್ಲಿ ಅನಿರೀಕ್ಷಿತತೆಯ ಅಂಶವೂ ಅಡಕವಾಗಿತ್ತು.

ಹೊಟ್ಟೆಯ ಮಾಂಸದ ಭಾಗವನ್ನು ಎಳೆದು ತಿರುಚುವುದು, ತಲೆಯನ್ನು ಗೋಡೆಗೆ ಅಪ್ಪಳಿಸುವುದು, ಮೊಣಗಂಟಿನ ಮೇಲೆ ಮರದ ಅಳತೆಕೋಲಿನಿಂದ ಹೊಡೆಯುವುದು–ಕೆಲವೊಮ್ಮೆ ಕೋಲು ತುಂಡಾಗುವವರೆಗೆ ಹೊಡೆಯುವುದು ಮತ್ತು ತನ್ನ ತರಗತಿಯಲ್ಲಿ ಗಮನ ನೀಡದ ವಿದ್ಯಾರ್ಥಿಗಳತ್ತ ಚಾಕ್ ಪೀಸ್ ಮತ್ತು ಡಸ್ಟರ್ ಗಳನ್ನು ಎಸೆಯುವುದು–ಇವುಗಳು ಶಿಕ್ಷೆಯ ಕೆಲವು ವಿಧಾನಗಳಾಗಿದ್ದವು. ಅವರು ಪರೀಕ್ಷೆಗೆ ಎರಡು ಬಗೆಯ ಪ್ರಶ್ನೆ ಪತ್ರಿಕೆಗಳನ್ನು ರೂಪಿಸುತ್ತಿದ್ದರು–ಒಂದು ಬುದ್ಧಿವಂತ ವಿದ್ಯಾರ್ಥಿಗಳಿಗೆ ಮತ್ತು ಇನ್ನೊಂದು ಉಳಿದವರಿಗೆ. ಆದುದರಿಂದಲೇ ನನ್ನ ಸಹಪಾಠಿಗಳಲ್ಲಿ ಹೆಚ್ಚಿನವರು ಅವರ ತರಗತಿಗೆ ಹಾಜರಾಗಲು ಭಯಪಡುತ್ತಿದ್ದುದರಲ್ಲಿ ಆಶ್ಚರ್ಯವೇನಿರಲಿಲ್ಲ.

ಇನ್ನೊಬ್ಬ ಶಿಕ್ಷಕಿ–ನಾನು ಒಳ್ಳೆಯ ಕಾರಣಗಳಿಗಾಗಿ ನೆನಪಿಸುವವರು–ನಮಗೆ ಇಂಗ್ಲಿಷ್ ಮತ್ತು ಕನ್ನಡವನ್ನು ಕಲಿಸುತ್ತಿದ್ದರು. ಅವರ ಜ್ಞಾನ, ಮಾರ್ಗದರ್ಶನ ಮತ್ತು ಪ್ರೋತ್ಸಾಹಗಳಿಗಾಗಿ ನಾನು ಅವರನ್ನು ಇಂದಿಗೂ ನೆನಪಿಸುತ್ತೇನೆ.

ರಾಮನ ಭಕ್ತೆಯಾದ ಶಬರಿಯ ಮೇಲಿನ ಒಂದು ಕವಿತೆಯನ್ನು ಅವರು ನಮಗೆ ಕಲಿಸಿದ್ದು ನನಗೆ ಅಚ್ಚಳಿಯದ ನೆನಪು. ಆಕೆಯು ತನ್ನ ಹಾವಭಾವ ಮತ್ತು ವಾಚನದ ಮೂಲಕ ಕವಿತೆಗೆ ಜೀವಂತಿಕೆಯನ್ನು ತುಂಬುತ್ತಿದ್ದರು. ಆಕೆ ಇಂಗ್ಲಿಷ್‌ನಲ್ಲಿ ಸುಲಲಿತವಾಗಿದ್ದಷ್ಟು ಕನ್ನಡದಲ್ಲಿರಲಿಲ್ಲವೆಂದು ನಮಗೆ ಗೊತ್ತಿತ್ತು ಆದರೆ ಆಕೆಯು ಯಾವಾಗಲೂ ಚೆನ್ನಾಗಿ ತಯಾರಿ ಮಾಡಿಕೊಂಡೇ ಬರುತ್ತಿದ್ದರು.

ಇಂಗ್ಲಿಷ್ ತರಗತಿಯಲ್ಲಿ ಇಂಗ್ಲಿಷ್ ಪಠ್ಯಪುಸ್ತಕದ ಆಯ್ದ ಭಾಗಗಳನ್ನು ಓದಿ ಹೇಳಲು ನಮಗೆ ಹೇಳಲಾಗುತ್ತಿತ್ತು. ನಮ್ಮ ಉಚ್ಚಾರಣೆಯ ಮೇಲೆ ನಾವು ಪ್ರಯೋಗ ನಡೆಸುವಂತೆ ಅವರು ನಮ್ಮನ್ನು ಉತ್ತೇಜಿಸುತ್ತಿದ್ದರು ಮತ್ತು ಓದನ್ನು ಪರಿಣಾಮಕಾರಿಯಾಗಿ ಮಾಡಲು ನಮಗೆ ಸಲಹೆ ನೀಡುತ್ತಿದ್ದರು. 'ಈ ಕೆಳಗಿನ ಪದಗಳನ್ನು ಬಳಸಿ ವಾಕ್ಯಗಳನ್ನು ರಚಿಸಿ' ಎಂಬ ಅಭ್ಯಾಸವನ್ನು ಮಾಡುವಾಗ ನಾವು ಪ್ರಯೋಗಶೀಲರಾಗುವಂತೆ ನಮ್ಮನ್ನು ಉತ್ತೇಜಿಸುತ್ತಿದ್ದರು. ಆಕೆಯು ಸ್ವಾರಸ್ಯಕರ ಹಾಸ್ಯಚಟಾಕಿಗಳನ್ನು ಸಿಡಿಸುತ್ತಿದ್ದರಿಂದ ಆಕೆಯ ತರಗತಿಗಳು ಮೋಜಿನಿಂದ ಕೂಡಿದ್ದವು.

ಸುಮಾರು ಮೂವತ್ತು ವರ್ಷಗಳು ಕಳೆದಿವೆ ಆದರೂ ಈ ಸ್ಫೂರ್ತಿದಾಯಕ ಶಿಕ್ಷಕಿಯಿಂದ ಬಂದಂತಹ ಪ್ರಶಂಸೆಯ ಮಾತುಗಳು ನನ್ನ ಮನದಲ್ಲಿ ಹಚ್ಚ ಹಸಿರು.

ನನ್ನ ಇಬ್ಬರು ಹೆಣ್ಣು ಮಕ್ಕಳು ಬೆಂಗಳೂರಿನಲ್ಲಿ ನಮ್ಮ ನೆರೆಹೊರೆಯ ಒಂದು ಜನಪ್ರಿಯ ಖಾಸಗಿ ಶಾಲೆಯಲ್ಲಿ ಓದುತ್ತಿರುವರು–ಇಲ್ಲಿ ಪ್ರವೇಶ ಸಿಗುವುದು ಬಹಳ ಕಷ್ಟ ಮತ್ತು ಶುಲ್ಕ ತುಂಬಾ ದುಬಾರಿ. ನಾನು ರಾಜ್ಯ ಮಂಡಳಿ ಪಠ್ಯಕ್ರಮ ಕಲಿತಿದ್ದರೆ ಅವರು ಸಿ.ಬಿ.ಎಸ್.ಇ. ಪಠ್ಯಕ್ರಮ ಕಲಿಯುತ್ತಿದ್ದಾರೆ. ರ್‍ಯಾಂಕ್ ಇಂದು ಗ್ರೇಡ್ ಗಳಾಗಿ ಬದಲಾಗಿದೆ–ಅತ್ಯುತ್ತಮ ಗ್ರೇಡ್ 'ಎ+' ಆಗಿದ್ದು ಅತ್ಯಂತ ಕೊನೆಯ ಗ್ರೇಡ್ 'ಇ' ಆಗಿರುತ್ತದೆ. ಪರೀಕ್ಷೆಗಳ ಸ್ಥಾನದಲ್ಲಿ ನಿರಂತರ ಸಮಗ್ರ ಮೌಲ್ಯಮಾಪನವಿದೆ. ಎಲ್ಲಾ ಸೆಮಿಸ್ಟರ್‌ಗಳಲ್ಲಿ 'ಎ+' ಪಡೆದ ವಿದ್ಯಾರ್ಥಿಗಳ ಹೆಸರುಗಳನ್ನು ಶಾಲೆಯ ಸ್ವಾಗತಾಗಾರದಲ್ಲಿ ಪ್ರದರ್ಶಿಸಲಾಗುವುದು. ಪೋಷಕ–ಶಿಕ್ಷಕ ಸಭೆಗಳಲ್ಲಿ ಅನೇಕ ಬಾರಿ, ಶಿಕ್ಷಕರು ಮಕ್ಕಳ ಪ್ರಗತಿಯ ಕುರಿತು ಮಕ್ಕಳ ಎದುರಿನಲ್ಲೇ ಚರ್ಚಿಸುವರು.

'ಡಿ' ಮತ್ತು 'ಇ' ದರ್ಜೆ ಪಡೆದ ಮಕ್ಕಳು ಪ್ರತಿ ಶನಿವಾರದಂದು ನಡೆಯುವ ಪರಿಹಾರ ಬೋಧನೆ ತರಗತಿಗೆ ಹಾಜರಾಗಬೇಕು. ಅವರ ಹೆಸರುಗಳನ್ನು ಇತರ ಸಹಪಾಠಿಗಳ ಮುಂದೆ ತರಗತಿ ಕೋಣೆಯೊಳಗೆ ಘೋಷಿಸಲಾಗುತ್ತದೆ. ಇದು ಮಕ್ಕಳ ಮೇಲೆ ಒತ್ತಡವನ್ನುಂಟುಮಾಡುತ್ತದೆ "3 ಈಡಿಯಟ್ಸ್" ಚಲನಚಿತ್ರದ ಅಮೀರ್ ಖಾನ್‌ನ ಹೇಳಿಕೆಯಾದ "ಶ್ರೇಣಿಗಳು ಸಂಬಂಧಗಳಲ್ಲಿ ಒಡಕು ಉಂಟುಮಾಡುತ್ತವೆ" ಎಂಬುದು ಇಲ್ಲಿ ಬಹಳ ಸತ್ಯ.

ನನ್ನ ಮಕ್ಕಳಿಂದ ಮತ್ತು ಅವರ ಸಹಪಾಠಿಗಳಿಂದ ಶಾಲೆಯಲ್ಲಿ ದೈಹಿಕ ಶಿಕ್ಷೆ ಅಸ್ತಿತ್ವದಲ್ಲಿದೆ ಎಂದು ನನಗೆ ತಿಳಿಯಿತು. ಕಿವಿಗಳನ್ನು ಹಿಂಡುವುದು, ಅಳತೆಗೋಲಿನಿಂದ ಹೊಡೆಯುವುದು, ಕೆನ್ನೆಗೆ ಬಾರಿಸುವುದು, ಪಠ್ಯಪುಸ್ತಕದಿಂದ ತಲೆಯ ಮೇಲೆ ಕುಟ್ಟುವುದು, ಉಂಗುರಗಳಿಂದ ತಲೆಯ ಮೇಲೆ ತಟ್ಟುವುದು ಮತ್ತು ಚಾಕ್ ತುಂಡುಗಳನ್ನು ಎಸೆಯುವುದು ಸಾಮಾನ್ಯವಾಗಿದೆ. ಶಿಸ್ತಿನ ಹೆಸರಿನಲ್ಲಿ, ಹೆಚ್ಚಿನ ಶಿಕ್ಷಕರು ತರಗತಿಯಲ್ಲಿ ಒಂದು ಭಯದ ವಾತಾವರಣವನ್ನು ಸೃಷ್ಟಿಸುವರು–ಈ ರೀತಿಯಾಗಿ ಮಕ್ಕಳು ಪ್ರಶ್ನೆಗಳನ್ನು ಕೇಳದಂತೆ ಅವರನ್ನು ನಿರುತ್ಸಾಹಗೊಳಿಸುವರು. ಹೆಚ್ಚಿನ ಶಿಕ್ಷಕರಿಗೆ/ಶಿಕ್ಷಕಿಯರಿಗೆ ಪಠ್ಯಕ್ರಮವನ್ನು ಪೂರ್ತಿ–ಗೊಳಿಸುವುದೇ ಏಕೈಕ ಗುರಿ.

ಪ್ರತಿಯೊಬ್ಬ ಮಗುವು ಅನನ್ಯವಾದುದು ಮತ್ತು ಅವು ಕಲಿಯುವ ರೀತಿ ಬೇರೆ ಬೇರೆ. ಮಕ್ಕಳು ತಾವು ಪ್ರಶಂಸೆ ಮತ್ತು ಪ್ರೋತ್ಸಾಹವನ್ನು ದೊರೆತಾಗ ಹೊಸ ಹುರುಪು, ಆತ್ಮವಿಶ್ವಾಸದಿಂದ ಉತ್ತಮವಾಗಿ ಕಲಿಯುತ್ತಾರೆ.

ಶಿಕ್ಷಕರು ವಿದ್ಯಾರ್ಥಿಯ ವ್ಯಕ್ತಿತ್ವ ಮತ್ತು ಭವಿಷ್ಯವನ್ನು ಕಟ್ಟಲೂ ಬಲ್ಲರು ಕೆಡವಲೂ ಬಲ್ಲರು.



**ಉಲ್ಲೇಖಗಳು:**

ಪೆಡಗಾಜಿ ಆಫ್ ದಿ ಅಪ್ರೆಸ್ಡ್: ಪೌಲೋ ಫ್ರೇರೆ.

ಜರ್ನಲ್ ಆಫ್ ಕೃಷ್ಣಮೂರ್ತಿ ಸ್ಕೂಲ್ಸ್, 11 ನೇ ಸಂಚಿಕೆ, ನಾಲೇಡ್ಜ್ ಎಂಡ್ ಡಯಲಾಗ್ ಇನ್ ಎಜುಕೇಶನ್, ಜೇವಿಯರ್ ಗೋಮೆಜ್ ರಾಡ್ರಿಗಸ್.

**ಗುರುರಾಜ್** ಅವರು ಕಳೆದ ಐದೂವರೆ ವರ್ಷಗಳಿಂದ ಅಜೀಂ ಪ್ರೇಂಜಿ ಫೌಂಡೇಶನ್ನಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಪ್ರಸ್ತುತ ಅವರು ಫೌಂಡೇಶನ್ನಿನ ಗ್ರಂಥಾಲಯ ಮತ್ತು ಚಟುವಟಿಕೆ ಕೇಂದ್ರವನ್ನು ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಇವರು ಕಂಪ್ಯೂಟರ್ ಸೈನ್ಸ್ ಇಂಜಿನೀರಿಂಗ್ ಮತ್ತು ಗ್ರಂಥಾಲಯ ಹಾಗು ಇನ್ಫರ್ಮೇಶನ್ ಸೈನ್ಸ್ ನಲ್ಲಿ ಪದವಿಗಳನ್ನು ಪಡೆದಿದ್ದಾರೆ. ಇವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಅಜೀಂ ಪ್ರೇಂಜಿ ಫೌಂಡೇಶನ್ನಿಗೆ ಬಂದಿರುತ್ತಾರೆ. ಇವರನ್ನು gururaj@azimpremjifoundation.org ಯಲ್ಲಿ ಸಂಪರ್ಕಿಸಬಹುದು.

